ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಇ.ವೆಬ್.ಸೈಟ್/2015-16 ದಿನಾಂಕ: 07-12-2015

# ಸುತ್ತೋಲೆ

**ವಿಷಯ:** ಶಾಲಾ ಮುಖ್ಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಅನಾವಶ್ಯಕವಾಗಿ ಶಿಕ್ಷಣ ಇಲಾಖೆಯ ಕಛೇರಿಗಳಿಗೆ ಭೇಟಿ ನೀಡುತ್ತಿರುವುದನ್ನು ತಪ್ಪಿಸಲು ವೆಬ್‌ಸೈಟ್ **www.schooleducation.kar.nic.in** ಇದರಲ್ಲಿ ಪ್ರಕಟಿಸುವ ಮಾಹಿತಿಗಳನ್ನು ತಿಳಿದುಕೊಳ್ಳಲು ಸೂಚನೆ.

ಬೆಂಗಳೂರಿನಲ್ಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಯಲ್ಲಿ ಇಲಾಖಾ ಆನ್‌ಲೈನ್ ವೆಬ್‌ಸೈಟ್ **www.schooleducation.kar.nic.in** ಇದೆ. ಈ ವೆಬ್‌ಸೈಟ್‌ನಲ್ಲಿ ಆಗಿಂದಾಗ್ಗೆ ಸರ್ಕಾರದಿಂದ ಹಾಗೂ ಶಿಕ್ಷಣ ಇಲಾಖಾ ವತಿಯಿಂದ ಹೊರಡಿಸುವ ಅದೇಶಗಳು, ಸುತ್ತೋಲೆಗಳು ಹಾಗೂ ಜ್ಞಾಪನಗಳನ್ನು ಪ್ರಕಟಿಸಲಾಗುತ್ತಿದೆ. ಈ ರೀತಿ ಪ್ರಕಟಿಸುತ್ತಿರುವ ಪ್ರಮುಖ ಮಾಹಿತಿಗಳ ವಿವರಗಳು ಈ ಕೆಳಗಿನಂತಿದೆ.

| ಕ್ರ ಸಂ | ವಿಭಾಗಗಳು | ಪಡೆಯಬಹುದಾದ ಮಾಹಿತಿ |
|---|---|---|
| 1. | ಪ್ರಾಥಮಿಕ ಶಿಕ್ಷಣ | ಪ್ರಾಥಮಿಕ ಶಿಕ್ಷಣಕ್ಕೆ ಸಂಬಂದಿಸಿದ ಶಿಕ್ಷಣ ನೀತಿ, ಶಾಲಾ ಅನುದಾನ, ಪ್ರೋತ್ಸಾಹದಾಯಕ ಯೋಜನೆಗಳು, ಇಲಾಖಾ ಕಾರ್ಯಕ್ರಮಗಳು, ಸುತ್ತೋಲೆಗಳು ಮತ್ತು ನಮೂನೆಗಳ ಕುರಿತಾಗಿ ವಿವರಗಳು ದೊರೆಯುತ್ತದೆ. |
| 2. | ಪ್ರೌಢ ಶಿಕ್ಷಣ | ಪ್ರೌಢ ಶಿಕ್ಷಣಕ್ಕೆ ಸಂಬಂದಿಸಿದ ಚಟುವಟಿಕೆಗಳು, ಶಾಲಾ ಅನುದಾನ, ಸುತ್ತೋಲೆಗಳು ಮತ್ತು ನಮೂನೆಗಳು, ವಾಣಿಜ್ಯ ಶಿಕ್ಷಣ, ದೈಹಿಕ ಶಿಕ್ಷಣ, ಚಿತ್ರಕಲಾ ಶಿಕ್ಷಣ, ವೃತ್ತಿ ಶಿಕ್ಷಣ ಮತ್ತು ಸಂಗೀತ ಶಿಕ್ಷಣಗಳ ಬಗ್ಗೆ ವಿವರಗಳು ದೊರೆಯುತ್ತದೆ. |
| 3. | ಅಲ್ಪಸಂಖ್ಯಾತ ಭಾಷಾ ನಿರ್ದೇಶನಾಲಯ | ಅಲ್ಪಸಂಖ್ಯಾತ ಭಾಷಾ ಶಾಲೆಗಳಿಗೆ ಸಂಬಂದಿಸಿದ ಚಟುವಟಿಕೆಗಳು, ಅಂಕಿ-ಅಂಶಗಳು, ಪ್ರೋತ್ಸಾಹದಾಯಕ ಯೋಜನೆಗಳು, ಹಿಂದಿ ಮತ್ತು ಅರೇಬಿಕ್ ಶಿಕ್ಷಣ, ಸಮನ್ವಯ ಶಿಕ್ಷಣದ ವಿವರಗಳು, ಸುತ್ತೋಲೆಗಳು ಮತ್ತು ನಮೂನೆಗಳು ದೊರೆಯುತ್ತದೆ. |
| 4. | ಡಿ.ಎಸ್.ಇ.ಆರ್.ಟಿ | ಶಿಕ್ಷಕರಿಗೆ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ತರಬೇತಿ ಹಾಗೂ ಇತರೆ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ದೊರೆಯುತ್ತದೆ. |
| 5. | ಮಧ್ಯಾಹ್ನ ಉಪಾಹಾರ ಯೋಜನೆ | ಮಕ್ಕಳಿಗೆ ನೀಡುವ ಮಧ್ಯಾಹ್ನ ಉಪಾಹಾರ ಯೋಜನೆಗೆ ಸಂಬಂದಿಸಿದ ವಿವರಗಳು ದೊರೆಯುತ್ತದೆ. |
| 6 | ಕೇಂದ್ರೀಕೃತ ದಾಖಲಾತಿ ಘಟಕ | ಶಿಕ್ಷಕರ ನೇಮಕಾತಿ ಕುರಿತಾದ ಅಂಶಗಳು ಹಾಗೂ ಮಾಹಿತಿಗಳು ದೊರೆಯುತ್ತದೆ |
| 7. | ಶಿಕ್ಷಕರ ಕಲ್ಯಾಣ ನಿಧಿ | ಶಿಕ್ಷಕರ ಹಾಗೂ ವಿಧ್ಯಾರ್ಥಿಗಳ ಕ್ಷೇಮ ನಿಧಿಯ ಬಗ್ಗೆ ಸಂಬಂದಿಸಿದ ವಿವರಗಳು ದೊರೆಯುತ್ತದೆ. |
| 8. | ಸೇವಾ ವಿವರಗಳು | ಶಿಕ್ಷಕರು, ಅಧಿಕಾರಿಗಳು ಹಾಗೂ ಭೋದಕೇತರ ಸಿಬ್ಬಂದಿಗಳಿಗೆ ಸಂಬಂದಿಸಿದ ಸೇವಾ ವಿವರಗಳು ಅಂದರೆ, ಜೇಷ್ಠತಾ ಪಟ್ಟಿ, ಬಡ್ತಿ ವಿವರಗಳು, ಅಧಿಕಾರಿಗಳ ಖಾಯಂ ಪೂರ್ವ ಸೇವಾ ಅವಧಿ ಘೋಷಣೆ, ಕಾಲಮಿತಿ ಬಡ್ತಿ ಮಂಜೂರಾತಿ ಇತ್ಯಾದಿ ವಿವರಗಳು ದೊರೆಯುತ್ತದೆ. |